ಕರ್ನಾಟಕ ಸರ್ಕಾರ

ರಾಷ್ಟ್ರೀಯ ಆರೋಗ್ಯ ಅಭಿಯಾನ

# ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ

ಕೆ.ಎನ್.ಟಿ.ಬಿ. ಸ್ಯಾನಿಟೋರಿಯಂ ಆಸ್ಪತ್ರೆ ಆವರಣ,ಬಂಗಾರಪೇಟೆ ರಸ್ತೆ, ಕೋಲಾರ  563102

ಸಂಖ್ಯೆ:ಡಿಹೆಚ್‌ಎಸ್/ PM-ABHIM /ನಮ್ಮ ಕ್ಲಿನಿಕ್/ಕೋ/01/2026-27 ದಿನಾಂಕ:17-07-2026

## ಪ್ರಕಟಣೆ

2026-27 ನೇ ಸಾಲಿಗೆ PM-ABHIM ಯೋಜನೆಯಡಿಯಲ್ಲಿ ನಮ್ಮ ಕ್ಲಿನಿಕ್‌ಗಳಿಗೆ ಖಾಲಿಯಿರುವ ಈ ಕೆಳಕಂಡ ವಿವಿಧ ವೃಂದದ ಹುದ್ದೆಗಳನ್ನು ವಿದ್ಯಾರ್ಹತೆ ಹಾಗೂ ಷರತ್ತುಗಳನ್ನೊಳಗೊಂಡಂತೆ 2026-27 ನೇ ಸಾಲಿಗೆ ಗುತ್ತಿಗೆ ಆಧಾರದ ಮೇಲೆ ನೇರ ಸಂದರ್ಶನ ಮೂಲಕ ನೇಮಕ ಮಾಡಿಕೊಳ್ಳಲಾಗುವುದು.

| ಕ್ರಸಂ | ಹುದ್ದೆಗಳ ವಿವರ | ವಿದ್ಯಾರ್ಹತೆ | ಮಾಸಿಕ ವೇತನ | ಒಟ್ಟು ಹುದ್ದೆಗಳು | ಅಭ್ಯರ್ಥಿ ವಯೋಮಿತಿ |
|---|---|---|---|---|---|
| 1 | ವೈದ್ಯಾಧಿಕಾರಿಗಳು | ಎಂಬಿಬಿಎಸ್ ಪದವಿ ಹೊಂದಿರಬೇಕು ಮತ್ತು ಕರ್ನಾಟಕ ವೈದ್ಯಕೀಯ Council ನಲ್ಲಿ ನೋಂದಣಿಯಾಗಿರಬೇಕು | 60000/- | 8 | 60 ವರ್ಷ ಒಳಗಿರತಕ್ಕದು |
| 2 | ಕಿರಿಯ ಪ್ರಯೋಗಾಶಾಲಾ ತಾಂತ್ರಿಕ ಅಧಿಕಾರಿಗಳು | ಎಸ್‌ಎಸ್‌ಎಲ್‌ಸಿ/ಪಿಯುಸಿ ಮತ್ತು ಪ್ರಯೋಗಶಾಲಾ ತಂತ್ರಜ್ಞತೆಯ ಡಿಪ್ಲೋಮೋ ಉತ್ತೀರ್ಣ ಹೊಂದಿರಬೇಕು. ಕಡ್ಡಾಯವಾಗಿ ಕರ್ನಾಟಕ ರಾಜ್ಯ ಅರೆವೈದ್ಯಕೀಯ ಮಂಡಳಿಯ ನೋಂದಣಿ ಮತ್ತು ಕಂಪ್ಯೂಟರ್ ಸಾಕ್ಷರತೆಯನ್ನು ಹೊಂದಿರಬೇಕು. | 16067/- | 2 | 45 ವರ್ಷ ಒಳಗಿರತಕ್ಕದು |
| 3 | ಶುಶ್ರೂಷಕ ಅಧಿಕಾರಿಗಳು | ಮಾನ್ಯತೆ ಪಡೆದ ನರ್ಸಿಂಗ್ ಶಾಲೆಯಲ್ಲಿ ಬಿ.ಎಸ್.ಸಿ/ ಜಿಎನ್‌ಎಂ ನರ್ಸಿಂಗ್ ನಲ್ಲಿ ಕೆಎನ್‌ಸಿ ನೋಂದಣಿ ಹೊಂದಿರಬೇಕು. ಹಾಗೂ ಕಂಪ್ಯೂಟರ್ ಸಾಕ್ಷರತೆಯನ್ನು ಹೊಂದಿರಬೇಕು. | 16067/- | 4 | 45 ವರ್ಷ ಒಳಗಿರತಕ್ಕದು |
| 4 | ಕಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿಗಳು | ಕಿ.ಮ.ಆ ಸಹಾಯಕಿಯ ತರಬೇತಿಯನ್ನು ಕಡ್ಡಾಯವಾಗಿ ಕರ್ನಾಟಕ ರಾಜ್ಯ ಅರೆವೈದ್ಯಕೀಯ ಮಂಡಳಿಯ ನೋಂದಣಿ ಮತ್ತು ಕಂಪ್ಯೂಟರ್ ಸಾಕ್ಷರತೆಯನ್ನು ಹೊಂದಿರಬೇಕು. | 15667/- | 01 | 40 ವರ್ಷ ಒಳಗಿರತಕ್ಕದು |

**ವಿಶೇಷ ಸೂಚನೆಗಳು:-**

1) ಮೇಲ್ಕಂಡ ಹುದ್ದೆಗಳಿಗೆ (ಎಂ.ಬಿ.ಬಿ.ಎಸ್ ವೈದ್ಯರು ಹೊರತುಪಡಿಸಿ) ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಕಂಪ್ಯೂಟರ್ ಜ್ಞಾನ ಕಡ್ಡಾಯವಾಗಿದ್ದು, ಕಿಯೋನಿಕ್ಸ್ ಸಂಸ್ಥೆ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು,
2) ಪ್ರತಿ ಸೋಮವಾರ ಬೆಳಗ್ಗೆ 11:00 ಗಂಟೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಕೋಲಾರ ಇಲ್ಲಿ ಅರ್ಹ ನೋಂದಾಯಿತ ಅಭ್ಯರ್ಥಿಗಳನ್ನು ಗುತ್ತಿಗೆ ಆಧಾರಿತ ನೇಮಕಾತಿಗೆ ನೇರ ಸಂದರ್ಶನಕ್ಕೆ ಹಾಜರಾಗಲು ತಮ್ಮ ಬಯೋಡೇಟಾ ಮತ್ತು ಮೂಲ ಅಂಕಪಟ್ಟಿ ದಾಖಲಾತಿಗಳು ಮತ್ತು ಇತರೆ ಎಲ್ಲಾ ಶೈಕ್ಷಣಿಕ ದಾಖಲೆಗಳ ಜೆರಾಕ್ಸ್ ಪ್ರತಿಗಳೊಂದಿಗೆ ನೇರ ಸಂದರ್ಶನಕ್ಕೆ ಹಾಜರಾಗಲು ಸೂಚಿಸಿದೆ.
3) ಮೂಲ ದಾಖಲೆಗಳ ಪರಿಶೀಲನೆಗೆ ಮೂಲ ದಾಖಲೆಗಳು ಹಾಜರು ಪಡಿಸದೇ ಇದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ತಿರಸ್ಕರಿಸಲಾಗುವುದು.
4) ಈ ನೇಮಕಾತಿಯು PM-ABHIM ರಾಜ್ಯ ಮಟ್ಟದ ನಿಯಮಾವಳಿ ಷರತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
5) ಈ ಮೇಲ್ಕಂಡ ಹುದ್ದೆಗಳ ನೇಮಕಾತಿ ಸಂದರ್ಭದಲ್ಲಿ ಚಾಲ್ತಿ ಇರುವ ಸರ್ಕಾರದ ಕಾಲಕಾಲಕ್ಕೆ ಬದಲಾಗುವ

6) ರೋಸ್ಟರ್ ಮೆರಿಟ್ ಕಮ್ ಆಧಾರದಲ್ಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.
7) ಹುದ್ದೆಗಳಿಗೆ ಸೂಚಿಸಿದ ವಿದ್ಯಾರ್ಹತೆ ಇಲ್ಲದಿರುವುದು ಹಾಗೂ ಫಲಿತಾಂಶಕ್ಕೆ ಕಾಯುತ್ತಿರುವ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದಿಲ್ಲ.
8) ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ಯಾವುದೇ ನಿರ್ಧಾರವನ್ನು ಕೈಗೊಳ್ಳುವ ಅಧಿಕಾರವನ್ನು ನೇಮಕಾತಿ ಸಮಿತಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘವು ಮಾತ್ರ ಹೊಂದಿರುತ್ತದೆ.
9) ಈ ಗುತ್ತಿಗೆ ಆಧಾರದ ಸೇವೆಯ ಆಯ್ಕೆಯನ್ನು ನಿರ್ಧಿಷ್ಠ ಸ್ಥಳಗಳಿಗೆ ಮಾಡಿಕೊಳ್ಳುವುದರಿಂದ ಅಭ್ಯರ್ಥಿಯು ಬೇಡಿಕೆಯ ಮೇಲೆ ಯಾವುದೇ ಸ್ಥಳಕ್ಕೆ ವರ್ಗಾವಣೆಗಾಗಲಿ / ಪರಸ್ಪರ ವರ್ಗಾವಣೆಯಾಗಲಿ ಅಥವಾ ನಿಯೋಜನೆಗಾಗಲಿ ಅವಕಾಶವಿರುವುದಿಲ್ಲ.
10) ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಕೆ.ಎಂ.ಸಿ ಮತ್ತು ಕೆ.ಎನ್.ಸಿ ಪ್ರಮಾಣ ಪತ್ರವನ್ನು ಮೂಲ ದಾಖಲೆಗಳ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.
11) ಮೂಲ ದಾಖಲಾತಿಗಳ ಪರಿಶೀಲನೆ ನಂತರ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಸಂಬಂಧಿಸಿದ ವಿವರಗಳನ್ನು https://Kolar.nic.in ವೆಬ್ ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.
12) ಆ ದಿನದ ಆಯ್ಕೆ ಪ್ರಕ್ರಿಯೆಯಲ್ಲಿ ಹುದ್ದೆಗಳ ಸಂಖ್ಯೆ ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು ಈ ಆಯ್ಕೆಯು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ಸಮಿತಿಯ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು
ಕೋಲಾರ ಜಿಲ್ಲೆ,ಕೋಲಾರ